ಕವಿತೆ


# ಸಿಗಬೇಕು ನೀನು ಒಂದು ದಿವ್ಯ ಸಂಜೆ

ವಿಧವಿಧದ ಕನಸುಗಳ
ಮಾರುಕಟ್ಟೆಯಂತಿರುವ
ಹೃದಯದ ಪ್ರತೀ ಅಂಗಡಿಯ
ಉದ್ಘಾಟನೆಯನ್ನು ನಿನ್ನ
ಅಮೃತ ಹಸ್ತದಿಂದ ನೆರವೇರಿಸಲು
ಸಿಗಬೇಕು ನೀನು ಒಂದು
ದಿವ್ಯ ಸಂಜೆ

ನಯವಾದ ಪ್ರೇಮದ ರಸ್ತೆಯ
ನಡುವೆ ಅಲ್ಲಲ್ಲಿ ಸಿಕ್ಕಿ
ಒಲವಿನ ವೇಗಕ್ಕೆ ಅಡ್ಡಿಮಾಡುತ್ತಿರುವ
ವಿರಹದ ರಸ್ತೆ ಉಬ್ಬುಗಳನ್ನು
ತೆರವುಗೊಳಿಸಲು
ಸಿಗಬೇಕು ನೀನು ಒಂದು
ದಿವ್ಯ ಸಂಜೆ

ಬರೀ ಪೆನ್ನಿನ ಮೂತಿಯನ್ನೇ
ಹಿಡಿದುಕೊಂಡು ಕವಿತೆ ಬರೆಯುವ
ನನ್ನ ಪೆದ್ದು ಬೆರಳುಗಳು
ಬದಲಿಗೆ
ನಿನ್ನ ತೋಳನ್ನು ಗಿಲ್ಲಿ ಮೈನೆರೆಯಲು
ಸಿಗಬೇಕು ನೀನು ಒಂದು
ದಿವ್ಯ ಸಂಜೆ

ಸಸ್ಯಾಹಾರದ ಮಹತ್ವದ ಬಗ್ಗೆ
ಉದ್ದುದ್ದ ಉಪನ್ಯಾಸ ನೀಡುತ್ತಾ
ಖಾಸಗಿಯಾಗಿ ನಿನ್ನ ಕಂಡರೆ
ಒಳಗೊಳಗೆ ಮುಕ್ಕಲು ಹೊಂಚುಹಾಕುವ
ನನ್ನ ಕಳ್ಳ ಸನ್ಯಾಸಿಯಂತ ಬಾಯಿಯ
ನಿಜರೂಪ ಬಯಲು ಮಾಡಲು
ಸಿಗಬೇಕು ನೀನು ಒಂದು
ದಿವ್ಯ ಸಂಜೆ




ತುಟಿಗಳಲ್ಲಿ ಬರೆದುಕೊಂಡ
ಗೌಪ್ಯ ಆಸೆಯ ಕವಿತೆಗಳ
ಕಡೇ ಪಕ್ಷ ನಿನ್ನ ಕಿವಿಯ
ಅಂಚೆಪೆಟ್ಟಿಗೆಗೆ ಹಾಕಿಸಿಕೊಳ್ಳಲಾದರೂ
ಸಿಗಲೇಬೇಕು ನೀನು ಒಂದು
ದಿವ್ಯ ಸಂಜೆ

● ಮಹೇಂದ್ರ ಎಸ್. ತೆಲಗರಹಳ್ಳಿ